# ತುಮಕೂರು ವಿಶ್ವವಿದ್ಯಾನಿಲಯ

## ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಕೇಂದ್ರ

**ಚಿವುಕುಲ ಕಟ್ಟಡ, ವಿಶ್ವವಿದ್ಯಾನಿಲಯ ಆವರಣ, ಬಿ.ಹೆಚ್.ರಸ್ತೆ ತುಮಕೂರು – 572 103**

**ಸಂಖ್ಯೆ: ತು.ವಿ:ಡಾ.ಬಿ.ಆರ್.ಅಂ.ಅ.ಕೇಂ:2025–26:** 60 **ದಿನಾಂಕ: 18.12.2025**

**ಪ್ರೊ. ಕೇಶವ**
**ನಿರ್ದೇಶಕರು**

### ದರಪಟ್ಟಿ ಆಹ್ವಾನ (ವಿ.ವಿ.ವೆಬ್ ಸೈಟ್‌ನಲ್ಲಿ)

**ವಿಷಯ: ದಿನಾಂಕ: 31.12.2025 ರಂದು ಐತಿಹಾಸಿಕ ಭೀಮಾ ಕೋರೇಗಾಂವ್ ವಿಜಯೋತ್ಸವ ಕಾರ್ಯಕ್ರಮಕ್ಕೆ "ಅಂಬೇಡ್ಕರ್ ಪರಿವರ್ತನಾ ಗೀತೆಗಳ ಗಾಯನ" ಕಾರ್ಯಕ್ರಮ ನೀಡಲು ದರಪಟ್ಟಿ ಆಹ್ವಾನಿಸುತ್ತಿರುವ ಕುರಿತು.**

**ಉಲ್ಲೇಖ: ಸಂಖ್ಯೆ:ತುವಿ:ಸಾ.ವಿ:2025–26/2872 ದಿನಾಂಕ: 17.12.2025.**

* * * *

ಈ ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಕೇಂದ್ರವು ಡಾ.ಬಿ.ಆರ್.ಅಂಬೇಡ್ಕರ್ ತರಬೇತಿ, ಸಂಶೋಧನೆ ಹಾಗೂ ವಿಸ್ತರಣಾ ಕೇಂದ್ರ, ಬೆಂಗಳೂರು ಇವರ ಸಹಯೋಗದೊಂದಿಗೆ **ದಿನಾಂಕ: 31.12.2025 ರಂದು "ಐತಿಹಾಸಿಕ ಭೀಮಾ ಕೋರೇಗಾಂವ್ ವಿಜಯೋತ್ಸವ"** ಆಚರಿಸುತ್ತಿದ್ದು, ಸದರಿ ಕಾರ್ಯಕ್ರಮಕ್ಕೆ 02 ಗಂಟೆಗಳ (ಸಂಜೆ 6.30 ರಿಂದ) ಅವಧಿಯವರೆಗೆ **"ಅಂಬೇಡ್ಕರ್ ಪರಿವರ್ತನಾ ಗೀತೆಗಳ ಗಾಯನ"** ನೀಡಲು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ.

**ಷರತ್ತು ಮತ್ತು ನಿಬಂಧನೆಗಳು:**

1. ಅಂಬೇಡ್ಕರ್ ಪರಿವರ್ತನಾ ಗೀತೆಗಳನ್ನು ಪ್ರಸ್ತುತ ಪಡಿಸಬೇಕು.
2. ದರಪಟ್ಟಿಯನ್ನು ಸಲ್ಲಿಸುವ ಮುನ್ನ ಅಂಬೇಡ್ಕರ್ ಪರಿವರ್ತನಾ ಗೀತೆಗಳ ಕೆಲವು ಹಾಡುಗಳನ್ನು ನಿರ್ದೇಶಕರು, ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ ಇವರಲ್ಲಿ ಪ್ರಸ್ತುತ ಪಡಿಸಿ ತದನಂತರ ದರಪಟ್ಟಿಯನ್ನು ಸಲ್ಲಿಸತಕ್ಕದ್ದು.
3. ಲಕೋಟೆಯ ಮೇಲೆ **"ಅಂಬೇಡ್ಕರ್ ಪರಿವರ್ತನಾ ಗೀತೆಗಳ ಗಾಯನ"** ಕಾರ್ಯಕ್ರಮ ನೀಡಲು ದರಪಟ್ಟಿ ಎಂದು ಸ್ಪಷ್ಟವಾಗಿ ನಮೂದಿಸಬೇಕು.
4. ದರಪಟ್ಟಿಯನ್ನು ಸಲ್ಲಿಸಲು ಕೊನೆಯ **ದಿನಾಂಕ: 26.12.2025 ಮದ್ಯಾಹ್ನ 12.00 ಗಂಟೆ.**
5. ದರಪಟ್ಟಿಯನ್ನು **ದಿನಾಂಕ: 26.12.2025 ರಂದು ಸಮಯ 12.30 ಕ್ಕೆ** ತೆರೆಯಲಾಗುವುದು.
6. ದರಪಟ್ಟಿಗಳನ್ನು **ಪ್ರೊ. ಕೇಶವ, ನಿರ್ದೇಶಕರು, ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ,** ಬಿ.ಹೆಚ್. ರಸ್ತೆ, ತುಮಕೂರು–572 103 ಇವರಿಗೆ ಮುದ್ದಾಂ ಅಥವಾ ಅಂಚೆಯ ಮೂಲಕ ತಲುಪಿಸಬಹುದು. ಅಂಚೆಯ ವಿಳಂಬಕ್ಕೆ ಅಥವಾ ಅಂಚೆಯು ತಲುಪದಿದ್ದಲ್ಲಿ ವಿಶ್ವವಿದ್ಯಾನಿಯವು ಜವಬ್ದಾರಿಯಾಗುವುದಿಲ್ಲ.
7. ದರಪಟ್ಟಿಯ ಅವಧಿಯು ದರಪಟ್ಟಿಯನ್ನು ತೆರೆದ ದಿನಾಂಕದಿಂದ ಒಂದು ವಾರದವರೆಗೆ ಚಾಲ್ತಿಯಲ್ಲಿರಬೇಕು.

**ಪು.ತಿ.ನೋ.,,**

8. ಮುಂಗಡವಾಗಿ ಹಣ ಪಾವತಿಸಲಾಗುವುದಿಲ್ಲ. ಗೀತಗಾಯನ ಕಾರ್ಯಕ್ರಮ ನೀಡಿದ ತರುವಾಯ ಹಣ ಪಾವತಿಸಲಾಗುವುದು.
9. ದರಪಟ್ಟಿಗಳನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಪೂರ್ಣ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ.
10. ಷರತ್ತುಬದ್ಧ ದರಪಟ್ಟಿಗಳನ್ನು ಪರಿಗಣಿಸಲಾಗುವುದಿಲ್ಲ.
11. ಪ್ರತಿ ಸಂಸ್ಥೆಯವರು ಏಕೈಕ ದರಪಟ್ಟಿಯನ್ನು ಮಾತ್ರ ಸಲ್ಲಿಸತಕ್ಕದ್ದು.
12. ಹೆಚ್ಚಿನ ವಿವರಗಳು ಅಥವಾ ಮಾಹಿತಿಯು ಅಗತ್ಯವಿದ್ದಲ್ಲಿ **ಪ್ರೊ. ಕೇಶವ, ನಿರ್ದೇಶಕರು, ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು** ಇವರನ್ನು ಸಂಪರ್ಕಿಸುವುದು. ಇವರ ದೂರವಾಣಿ **ಸಂಖ್ಯೆ:, 9880836863**

Keshava

**ನಿರ್ದೇಶಕರು,**

ನಿರ್ದೇಶಕರು
ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರ
ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

**ಪ್ರತಿಗಳು:**
1. ಸಿಸ್ಟಮ್ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. (ಇಂದೇ ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು)
2. ಕಚೇರಿ ಪ್ರತಿ